Teachingninja.in

Latest Govt Job updates

Private Job updates

Free Mock tests available

Visit - teachingninja.in

# KPSC
# SAAD

## Previous Year Paper
### Kannada Paper-I
### 01 Feb, 2017

Teachingninja.in

Teachingninja.in

**2017**

**147-Compulsory Kannada (Paper I)**

**147- ಕಡ್ಡಾಯ ಕನ್ನಡ (ಪತ್ರಿಕೆ I)**

Time: 3 Hours | Maximum Marks : 150

ಸಮಯ : 3 ಗಂಟೆಗಳು | ಗರಿಷ್ಠ ಅಂಕಗಳು: 150

ಪ್ರಶ್ನೆಗಳಿಗೆ ಉತ್ತರಿಸುವ ಮುನ್ನ ಮುಖಪುಟದಲ್ಲಿ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

Candidate should read the Instructions given in the Facing Sheet, before you answering the questions.

ಸೂಚನೆಗಳು

INSTRUCTIONS

1. ಅಭ್ಯರ್ಥಿಗಳು ಎಲ್ಲಾ ಭಾಗಗಳನ್ನು ಮತ್ತು ಪ್ರಶ್ನೆಗಳನ್ನು ಉತ್ತರಿಸಬೇಕು.
2. ನಿರ್ದಿಷ್ಟವಾಗಿ ಸೂಚಿಸಿದ ಹೊರತು, ಉತ್ತರಗಳನ್ನು ಕನ್ನಡದಲ್ಲಿ ಬರೆಯತಕ್ಕದ್ದು.
3. ಭಾಗ ಎ ಪ್ರಶ್ನೆ ಸಂಖ್ಯೆ 3ಕ್ಕೆ ಸಂಬಂಧಿಸಿದಂತೆ ಪ್ರೆಸಿ ಗದ್ಯಭಾಗವು ಸೂಚನೆಗಿಂತ ಬಹಳ ಹೆಚ್ಚು ಅಥವಾ ಕಡಿಮೆಯಾದಲ್ಲಿ ಅಂಕಗಳನ್ನು ಕಳೆಯಲಾಗುವುದು.
4. ಭಾಗ ಎ ಪ್ರಶ್ನೆ ಸಂಖ್ಯೆ 3ನ್ನು ನೀಡಲಾದ ಪ್ರೆಸಿ ಹಾಳೆಯಲ್ಲಿಯೇ ಉತ್ತರಿಸತಕ್ಕದ್ದು.

## SECTION - A

**ಭಾಗ – ಎ**

**1.** ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು 200 ಶಬ್ದಗಳಲ್ಲಿ ಒಂದು ಪ್ರಬಂಧ ಬರೆಯಿರಿ.

(1) ಸ್ವಚ್ಛಭಾರತ

(2) ಕನ್ನಡ ಮತ್ತು ಮಾಹಿತಿ ತಂತ್ರಜ್ಞಾನ

(3) ಮಹಿಳೆ ಮತ್ತು ಜಾಹೀರಾತು

(4) ಪುಸ್ತಕ ಸಂಸ್ಕೃತಿ **(25 ಅಂಕಗಳು)**

**2.** ಸೂಚನೆ: ಈ ಕೆಳಗಿನ ಗದ್ಯಭಾಗವನ್ನು ಗಮನವಿಟ್ಟು ಓದಿ ಕೊನೆಯಲ್ಲಿರುವ ಪ್ರಶ್ನೆಗಳಿಗೆ ನಿಮ್ಮ ಮಾತುಗಳಲ್ಲಿ ಉತ್ತರಿಸಿ.

ಇತ್ತೀಚೆಗೆ ರೈತರ ಆತ್ಮಹತ್ಯೆ ಮತ್ತು ಮಲೆನಾಡಿನ ಕೃಷಿಯ ವಿಚಾರವಾಗಿ ಚರ್ಚಿಸುವ ಸಂದರ್ಭವೊಂದು ಬಂದಿತ್ತು. ಉತ್ತರಕರ್ನಾಟಕ, ಬಯಲು ಸೀಮೆಗೆ ಹೋಲಿಸಿದರೆ ಕರಾವಳಿ – ಮಲೆನಾಡಿನಲ್ಲಿ ರೈತರ ಆತ್ಮಹತ್ಯೆಯ ಪ್ರಮಾಣ ತುಂಬಾ ಕಮ್ಮಿ. ಅಲ್ಲೊಂದು ಇಲ್ಲೊಂದು ರೈತರು ಆತ್ಮಹತ್ಯೆ ಮಾಡಿಕೊಂಡಾಗ, ಅದು "ಸಾಲದಭಾಧೆ" ಯಿಂದ ಸತ್ತರು ಎಂದು ಸುದ್ದಿಯಾದರೂ ಆ ಸಾವಿನ ಬೆನ್ನಿಗೆ ಬಿದ್ದರೆ ಕಾರಣ ಬೇರೆಯೇ ಕಾಣಿಸಿಕೊಳ್ಳುತ್ತದೆ.

ಅಂಥ ಕಾರಣಗಳನ್ನು ಗುರುತಿಸುವ ಮುನ್ನ ನಮ್ಮ ಮಾಧ್ಯಮಗಳ ಬಗ್ಗೆ ಒಂದಿಷ್ಟು ಬರೆಯಬೇಕು. ಭೂಮಿಯ ಮೇಲೆ ಬದುಕುವ ಯಾವನೇ ಒಬ್ಬ ಆತ್ಮಹತ್ಯೆ ಮಾಡಿಕೊಂಡರೂ ಅದನ್ನು ರೈತರ ಆತ್ಮಹತ್ಯೆ ಎಂದು ಬಣ್ಣಿಸುವ ಮಾಧ್ಯಮಗಳೇ ಇಂದು ಹೆಚ್ಚು. ಮಾಧ್ಯಮಗಳ ಕ್ಯಾಮರಾಗಳು ಸತ್ತ ಶವದೊಂದಿಗೆ ಅವನ ಮನೆಯ ಸುತ್ತಲಿನ ತೆಂಗು, ಕಂಗು, ಬಾಳೆಗಳನ್ನು ಫೋಕಸ್ ಮಾಡುತ್ತವೆ. ನಿಜವಾಗಿ ಅವನಿಗೆ ಎಷ್ಟು ಜಾಗವಿದೆ? ಅದರಲ್ಲಿ ಎಷ್ಟು ಬೆಳೆಯಿದೆ? ಅವು ಯಾವುವು? ನೀರಾವರಿ ವ್ಯವಸ್ಥೆ ಹೇಗೆ? ಇವುಗಳ ಬಗ್ಗೆ ಮಾಧ್ಯಮಗಳು ಯೋಚಿಸುವುದಿಲ್ಲ. ಅವರ ಪ್ರಕಾರ ಪೇಟೆಯಲ್ಲಿರುವವರು ಮಾತ್ರ ರೈತರಲ್ಲ. ಪೇಟೆ ಬಿಟ್ಟು ಇರುವವರೆಲ್ಲಾ ಕೃಷಿಕರು. ಇವರು ಏನೇ ಕಾರಣಗಳಿಗೆ ಸಾಯಲಿ ಅದು ಕೃಷಿ ಮೂಲ ಆತ್ಮಹತ್ಯೆಗಳೇ ಆಗಿಬಿಡುತ್ತವೆ ಮತ್ತು ಅವರ ಸಾವಿಗೆ ಕೃಷಿಯೇ ಕಾರಣವಾಗಿ ಬಿಡುತ್ತದೆ.

ಮಾಧ್ಯಮಗಳಲ್ಲಿ ಮತ್ತೊಂದು ವರ್ಗವಿದೆ. ಕನ್ನಡದಲ್ಲಿರುವ ಅಂಥ ಒಂದು ಚಾನೆಲನ್ನು ಗಮನಿಸಿ. ಅವರು ರೈತರನ್ನು ಗಮನಿಸುವುದೇ ಇಲ್ಲ. ಬೆಂಗಳೂರಿನ ಫುಟ್‌ಪಾತ್ ಮೇಲೆ ಇರಿಸಿದ ಮಣ್ಣಿನ ಕರಕೌಶಲ್ಯಗಳ ಬಗ್ಗೆ ಅವರು ವಿಶೇಷ ವರದಿಮಾಡಬಲ್ಲರು. ಉಗುರಿಗೆ ಬಣ್ಣ ಹಾಕುವುದು ಹೇಗೆ ಎಂದು ತಜ್ಞರನ್ನು ಅವರು ಸಂದರ್ಶನ ಮಾಡಬಲ್ಲರು. ಆದರೆ ರೈತರು ಹೇಗೆ ಭತ್ತ ಬೆಳೆಯುತ್ತಾರೆ? ಬೆಳೆಸಿದ ಬೆಳೆಗಳಿಗೆ ಮಾರುಕಟ್ಟೆ ವ್ಯವಸ್ಥೆ ಹೇಗಿದೆ ಎಂದು ಅವರು ತಲೆ ಕೆಡಿಸಿಕೊಳ್ಳುವುದಿಲ್ಲ. ಕಾರಣ ಅವರನ್ನು ಒಂದೆಡೆ ಕೂರಿಸಿ ಪುನರ್ಮನನ ï ತರಬೇತಿ ಶಿಬಿರಗಳನ್ನು ನಡೆಸುವುದಿಲ್ಲ. ಆ ಕಾರಣಕ್ಕಾಗಿಯೇ ಶೇಕಡಾ 70ಕ್ಕಿಂತ ಹೆಚ್ಚಿರುವ ರೈತರ ಬಗ್ಗೆ ಅವರು ಸುದ್ದಿ ಮಾಡಲು ಹೋಗುವುದಿಲ್ಲ !

Teachingninja.in

ಎಲ್ಲಾ ರೈತರ ಸಾವನ್ನು ಕೃಷಿಯ ಸಾವು ಎಂದು ಬಣ್ಣಿಸುವ, ಗ್ರಹಿಸುವ ತಜ್ಞತೆ ಸ್ವಲ್ಪ ಆಳಕ್ಕೆ ಇಳಿದಾಗ ನಿಜವಾದ ಕಾರಣಗಳು ಗೊತ್ತಾಗುತ್ತದೆ. ಮಲೆನಾಡು ಮತ್ತು ಕರಾವಳಿಯಲ್ಲಿ ಯಾವುದೇ ರೈತ ಸಾಯಲಿ, ಅದಕ್ಕೆ ಕಾರಣಗಳು ಖಂಡಿತವಾಗಿ ಬೇರೆಯೇ ಆಗಿರುತ್ತವೆ ಎಂಬುದು ನಿಶ್ಚಿತ. ಅಡಿಕೆ, ತೆಂಗು, ಕಾಫಿ, ಏಲಕ್ಕಿಯಂಥ ಬಹುವಾರ್ಷಿಕ ಬೆಳೆಗಳನ್ನು ಅವಲಂಬಿಸಿರುವ ರೈತರ ಹಿಡುವಳಿ ದೊಡ್ಡದಿದ್ದರೆ ಆ ಭೂಮಿಯಲ್ಲಿ ಖಂಡಿತಾ ಅವನಿಗೆ, ಅವನ ಮನೆಮಂದಿಗೆ ಅನ್ನಕ್ಕೆ ಸಮಸ್ಯೆಯಾಗದು. ರೈತ ಕುಟುಂಬ ಕೃಷಿಯ ಒಟ್ಟು ಕಾರ್ಯಭಾರವನ್ನು ತಾವೇ ನಿಭಾಯಿಸಿದರೆ, ನಿರ್ವಹಿಸಿದರೆ ಮೇಲಿನ ಯಾವುದೇ ಬೆಳೆ ರೈತನನ್ನು ಸುಲಭವಾಗಿ ಸಾಯಲು ಬಿಡದು. ಆರ್ಥಿಕವಾಗಿ ಚೇತರಿಸುತ್ತದೆ.

ಒಂದು ಎಕರೆ ಅಡಿಕೆ ತೋಟವನ್ನು ಹೊಂದಿರುವ ರೈತನೊಬ್ಬ ತನಗೆ ಕಾರು ಬೇಕು, ಮನೆಯಲ್ಲಿ ಟಿ.ವಿ. ಬೇಕು, ವಾಶಿಂಗ್ ಮೆಷಿನ್ ಬೇಕು ಎಂದೆಲ್ಲಾ ಬಯಸಿದಾಗ ಅವೆಲ್ಲವನ್ನು ಪೂರೈಸುವ ಭಾರ ಅಡಿಕೆ ತೋಟಕ್ಕೆ ವರ್ಗಾಯಿಸಲ್ಪಡುತ್ತದೆ. " ತನಗೆ ನೀರು ಬೇಕು ï ಗೊಬ್ಬರ ಕೊಡು, ನಿನಗೆ ಅನ್ನ ಕೊಡುತ್ತೇನೆ ". ಬರೀ ಇಷ್ಟಕ್ಕೆ ರೈತ ಮತ್ತು ತೋಟದ, ಬೆಳೆಯ ನಡುವೆ ಒಡಂಬಡಿಕೆ ಇದ್ದರೆ ಖಂಡಿತಾ ರೈತನ ಸಾವಿಗೆ ತೋಟ, ಗದ್ದೆ ಕಾರಣವಾಗದು, ಪಕ್ಕದ ಮನೆಯ ಅಂಗಳದಲ್ಲಿ ಕಾರು ನಿಂತಿದೆ, ಬೈಕು ನಿಂತಿದೆ ಎಂದು ತೋಟವನ್ನು ಬ್ಯಾಂಕ್‌ಗೆ ಅಡವಿಟ್ಟು ಸಾಲ ತೆಗೆದಾಗ, ನಿಜವಾದ " ರೈತ ಸಮಸ್ಯೆ " ಆರಂಭವಾಗುತ್ತದೆ. ಕಾರು ತೆಗೆದ ಸಾಲದ ಭಾರ, ರೈತ ಕುಟುಂಬದ ಅನ್ನದ ಭಾರ ï ಇಷ್ಟೆಲ್ಲವನ್ನು ಮನೆ ಮುಂದಿನ ಪುಟ್ಟ ತೋಟ ï ಗದ್ದೆಯ ಮೇಲೆ ಹಾಕಿದಾಗ ಅದು ಎಲ್ಲವನ್ನೂ ಸಹಿಸಿಕೊಳ್ಳುವುದಾದರೂ ಹೇಗೆ?

ದೇರ್ಲದಂಥ ಪುಟ್ಟ ಊರಲ್ಲಿ ಸುಮಾರು ಆರೇಳು ಕೃಷಿಕರು ಸ್ವತಃ ನಾಲ್ಕು ಚಕ್ರದ ವಾಹನಗಳನ್ನು ಇಟ್ಟುಕೊಂಡಿದ್ದಾರೆ. ಮಕ್ಕಳನ್ನೆಲ್ಲಾ ಕಲಿಕೆಗಾಗಿ ದೂರದ ಪೇಟೆಯ ಶಾಲೆಗೆ ಕಳಿಸುತ್ತಿದ್ದಾರೆ. ಇವರಲ್ಲಿ ಹೆಚ್ಚಿನವರಿಗೆ ತೋಟ ಬಿಟ್ಟರೆ ಆದಾಯದ ಬೇರೆ ಮೂಲಗಳಿಲ್ಲ. ಇಷ್ಟಾದರೂ ಇವರೆಲ್ಲಾ ಒಂದಾಗಿ ಸೇರುವ ಸಂದರ್ಭ ಸಮಾರಂಭಗಳಲ್ಲಿ ಮಾತನಾಡುವ ಮಾತುಗಳನ್ನು ಸುಮ್ಮನೆ ನಿಂತು ಕೇಳಬೇಕು. ಕೃಷಿಗೆ ಹಿಡಿಶಾಪ ಹಾಕುತ್ತಾರೆ. ಕೃಷಿ ನಮ್ಮನ್ನು ಸಾಯಿಸಿತು ಎನ್ನುತ್ತಾರೆ. " ಈ ಕೃಷಿಯಿಂದ, ನೆಲದಿಂದ ಖಂಡಿತಾ ಉದ್ಧಾರ ಇಲ್ಲ " ಎಂದು ಶಪಿಸುತ್ತಾರೆ. ಉದ್ಯೋಗಸ್ಥರದ್ದೇ ನಿಜವಾದ ಬದುಕು, ಪೇಟೆಯಲ್ಲಿರುವವರೇ ಅದೃಷ್ಟವಂತರು ಎಂದೆಲ್ಲಾ ಕೃಷಿಯ ಸೋಲನ್ನು ಎಳೆಎಳೆಯಾಗಿ ವಿವರಿಸುತ್ತಾರೆ.

ಇಂಥವರ ತೋಟದಲ್ಲೇ ಕೂಲಿ ಕೆಲಸ ಮಾಡುವ ಬಿಜಾಪುರ ಕಡೆಯ ಅಥವಾ ಧಾರವಾಡದ ವಲಸೆ ಜನರನ್ನು ಕೇಳಬೇಕು. ಅವರೆಲ್ಲ ಅಲ್ಲಿ ಹದಿನಾರು ಇಪ್ಪತ್ತು ಎಕರೆ ಭೂಮಿ ಹೊಂದಿದವರು! ನಮ್ಮೂರಲ್ಲಿ ನಾಲ್ಕು ಎಕರೆ, ಐದು ಎಕರೆ ಅಡಿಕೆ ತೋಟ ಇರುವ ಯಜಮಾನರ ಮನೆಯಲ್ಲಿ ಇವರು ಇಂದು ಕೂಲಿ ಕೆಲಸ ಮಾಡುವವರು!

ಮಳೆ ಬರಲಿಲ್ಲ, ಭೂಮಿಯಲ್ಲಿ ನೀರಿಲ್ಲ, ಕೃಷಿ ಮಾಡಲು ಸಾಧ್ಯವೇ ಇಲ್ಲ ಎಂದು ಅವರೆಲ್ಲ ಕರಾವಳಿಗೆ ಬಂದವರು. ಆತ್ಮಹತ್ಯೆ ಮಾಡಬೇಕೆಂದು ಅನ್ನಿಸದವರು. ಅವರಿಗೆ ಕಾರು, ತೇರು ಖರೀದಿಯ ಆಸೆಗಳಿಲ್ಲ. ಬರೀ ಅನ್ನದ ಸಮಸ್ಯೆ. ಮರದಡಿಯಲ್ಲೂ ಡೇರೆ ಹಾಕಿ ಬದುಕಲು ಸಾಧ್ಯವಿರುವವರು ಅವರು.

ಆತ್ಮಹತ್ಯೆ ಮಾಡಿಕೊಳ್ಳದೆ ಕೇವಲ ಅನ್ನಕ್ಕಾಗಿಯೇ ಬದುಕುವ ಇಂಥ ಮಾದರಿಗಳು ತಮ್ಮದೇ ತೋಟದಲ್ಲಿದ್ದರೂ, ಮಲೆನಾಡಿನ ಮಂದಿಗೆ ತೋಟ ಕೇವಲ ಅನ್ನವನ್ನಷ್ಟೇ ಅಲ್ಲ, ಸುಖದ ಎಲ್ಲಾ ಸಾಮಗ್ರಿಗಳನ್ನು ಒದಗಿಸಬೇಕು ಎಂಬ ಇರಾದೆಯೇ, ಅದರ ಈಡೇರಿಕೆಯೇ ಮುಖ್ಯವಾಗುತ್ತದೆ. ಪರಿಣಾಮ ಬ್ಯಾಂಕು ಸಾಲ, ಕೈಸಾಲಗಳು ಹೆಚ್ಚಾಗುತ್ತದೆ. ತೆಗೆದ ಸಾಲವನ್ನು ಕಟ್ಟಲಾಗದೆ ಇಂಥ ರೈತರು ಸತ್ತಾಗ ಅದಕ್ಕೆ ಕಾರಣ ತೋಟ, ಕೃಷಿ ಎಂದು ಬೆರಳಿಟ್ಟು, ತೋರಿಸುವುದು ಎಂಥ ಮೂರ್ಖತನ.

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ: **(5 x 5 = 25 ಅಂಕಗಳು)**

a) ರೈತರು ಆತ್ಮಹತ್ಯೆ ಮಾಡಿಕೊಂಡರೆ ಏನೆಂದು ಸುದ್ದಿಯಾಗುತ್ತದೆ?

b) ಯುವ ವರದಿಗಾರರು ರೈತರ ಬಗ್ಗೆ ಬರೆಯದಿರಲು ಕಾರಣವೇನು?

c) ನಿಜವಾದ " ರೈತ ಸಮಸ್ಯೆ " ಆರಂಭವಾಗುವುದು ಯಾವಾಗ? ಹೇಗೆ?

d) ಪೇಟೆಯ ಉದ್ಯೋಗಸ್ಥರ ಬಗ್ಗೆ ರೈತರಲ್ಲಿರುವ ಭಾವನೆಗಳೇನು?

e) ಮಲೆನಾಡಿನ ಮಂದಿ ತೋಟದಿಂದ ಏನೇನನ್ನು ನಿರೀಕ್ಷಿಸುತ್ತಾರೆ?

**3.** ಪ್ರೆಸಿ ಲೇಖನ Precis writing :

ಈ ಕೆಳಗಿನ ಗದ್ಯಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ 75 ಶಬ್ದಗಳಿಗೆ ಮೀರದಂತೆ ಸಂಗ್ರಹಿಸಿ ಬರೆಯಿರಿ. ಲೇಖನದ ಕೊನೆಯಲ್ಲಿ ನೀವು ಬಳಸಿರುವ ಶಬ್ದಗಳ ಸಂಖ್ಯೆಯನ್ನು ಸೂಚಿಸಿ.

ಆತ್ಮಸಂಪತ್ತು ಹೇಗೆ ಯಮ ನಿಯಮ ಪ್ರತ್ಯಾಹಾರ ಪ್ರಾಣಾಯಾಮಾದಿಗಳಿಂದ ಬೆಳೆಯುತ್ತದೆಯೋ ಹಾಗೆಯೇ ಹಣದಿಂದಲೂ ಬೆಳೆಯುತ್ತದೆ. ಇದಕ್ಕೆ ಉದಾಹರಣೆಯಾಗಿ ರಾಮಕೃಷ್ಣ ಪರಮಹಂಸರು ಹೇಳಿದ ಈ ಕತೆ ತೆಗೆದುಕೊಳ್ಳಿ. ಒಬ್ಬ ಹಠಯೋಗಿ ತನ್ನ ಯೋಗಶಕ್ತಿಯನ್ನು ತೋರಿಸಬೇಕೆಂದು ನೀರಿನ ಮೇಲೆ ಇಲ್ಲಿಂದ ಅಲ್ಲಿಗೆ ನಡೆದುಕೊಂಡು

Teachingninja.in

ಬಂದನಂತೆ. ರಾಮಕೃಷ್ಣರು ಅಲ್ಲಿದ್ದ ಅಂಬಿಗನಿಗೆ ಮೂರುಕಾಸು ಕೊಟ್ಟು ಆ ಯೋಗಿ ನಡೆದುಬಂದ ದೂರವನ್ನು ತೆಪ್ಪದಲ್ಲಿ ತೇಲಿಬಂದು " ನಿನ್ನ ಯೋಗದ ಬೆಲೆ ಇಷ್ಟು " ಎಂದರಂತೆ. ಈ ಕತೆಯನ್ನು ಓದಿದ ಮೇಲಂತೂ ನನಗೆ ನಿಜವಾಗಿ ಹಣದ ಮೇಲಿನ ಗೌರವ ಹೆಚ್ಚಿದೆ. ಮೂರು ಕಾಸಿಗೆ ಇಷ್ಟು ಯೋಗಶಕ್ತಿ ಇರಬೇಕಾದರೆ ಸವರನ್‌ಗಳ ಯೋಗಬಲಮಾನವೆಷ್ಟಿರಬಹುದು? ಅಷ್ಟೇಕೆ ಮಗುವಿನ ಕೈಯಲ್ಲಿ ಮೂರು ಕಾಸು ಕೊಡಿ. ಅದು ಅಳು ನಿಲ್ಲಿಸುತ್ತದೋ ಇಲ್ಲವೋ ನೋಡಿ. ಅದಕ್ಕೆ ಪೂರ್ವಭಾವಿಯಾಗಿ ನೀವು ಆಡುವ ಮಾತು, ತೋರುವ ಪ್ರೇಮ, ಮಾಡುವ ಮುದ್ದು, ಇವು ಎಲ್ಲಾ ಆ ಮೂರು ಕಾಸಿನ ಮುಂದೆ ನಿಷ್ಫಲ. ಮಗುವಿನ ಅಳುವನ್ನು ಕೂಡ ನಿಲ್ಲಿಸುವ ಶಕ್ತಿ ಹಣಕ್ಕಿದೆ ಎಂದ ಮೇಲೆ ಅದರ ಗುಣವನ್ನು ಇನ್ನೆಷ್ಟು ಹೊಗಳೋಣ. ಜಗತ್ತೆಂಬ ಹಲಸಿನ ಹಣ್ಣನ್ನು ಬಿಚ್ಚಿ, ಅದರ ಅಂಟು ನಮಗೆ ಅಂಟದಂತೆ ಅದರ ತೊಳೆಗಳನ್ನು ಬಿಡಿಸಿ ಸವಿಯಬೇಕೆಂಬ ನಮ್ಮಂಥವರೆಲ್ಲರಿಗೂ ಈ ಹಣದ ಜಿಡ್ಡು ಬೇಕೇಬೇಕು. ಅದಿದ್ದರೆ ನಾವು ಸಂಸಾರದಲ್ಲಿ ತಾವರೆ ಎಲೆಯ ಮೇಲಣ ಹನಿಯಂತೆ ನಿರ್ಲಿಪ್ತರಾಗಿ ಆತ್ಮತೇಜಸ್ಸನ್ನು ಎಲ್ಲೆಡೆಯೂ ಬೆಳಗುತ್ತಾ ಹೊಳೆಯಬಹುದು. ಇಲ್ಲದೆ ಹೋದರೆ ಜಗತ್ತೇ ಬೇಸರವಾಗುವ ಸಂಭವವುಂಟು. ಇದರಲ್ಲಿ ನಮ್ಮ ಆತ್ಮವನ್ನು ತೊಳೆದು ಶುಭ್ರವಾಗಿ ಇಡಬಲ್ಲ ವಸ್ತು ಹಣ ಒಂದೇ. ದೇಶಪ್ರೇಮ, ಪುತ್ರವಾತ್ಸಲ್ಯ, ಪತ್ನೀಪ್ರಣಯ, ಧರ್ಮಾಭಿರುಚಿ, ಕರುಣಾಪ್ರೇರಣೆ ï ಇಂಥ ಎಲ್ಲಾ ಆಧ್ಯಾತ್ಮಿಕ ಸದ್ಗುಣಗಳನ್ನೂ ಹತೋಟಿಯಲ್ಲಿಟ್ಟು ಕಾಲಕಾಲಗಳಲ್ಲಿ ಅವು ಪ್ರಸ್ಫುಟ ಹಾಗೂ ಪ್ರಚ್ಛನ್ನವಾಗುವಂತೆ ಮಾಡುವ ಆತ್ಮಸಾಧನ ಹಣ. ಈ ಹಣವೊಂದಿಲ್ಲದೇ ಹೋಗಿದ್ದರೆ, ಎಷ್ಟೊಂದು ಹೋಟೆಲ್ ಮಾಣಿಗಳಿಗೂ, ದೋಬಿಗಳಿಗೂ, ಕ್ಷೌರಿಕರಿಗೂ, ವಿನೋದಿಗಳಿಗೂ ನಾವು ಕೃತಜ್ಞ ವಿನಮ್ರರಾಗಿರಬೇಕಾಗಿತ್ತು ! ಅನಾಥಾಲಯಕ್ಕೂ ಮಾಡ್ರನ್ ಹೋಟೆಲಿಗೂ ಇರುವ ವ್ಯತ್ಯಾಸವನ್ನು ಗಮನದಲ್ಲಿಟ್ಟುಕೊಂಡರೆ ಈ ಮಾತು ಅನುಭವಕ್ಕೆ ಬರುತ್ತದೆ. ಎರಡರಲ್ಲೂ ಸೇವೆ ಒಂದೇ, ಭಾವ ಬೇರೆ. ಲೋಕದ ಜನ ಪರಸ್ಪರವಾಗಿ ಮಾಡುವ ಕೈಂಕರ್ಯ ರೂಪವಾದ ಇಂಥ ನಿರ್ಮಾಲ್ಯಗಳನ್ನು ದಿನದಿನ ಹೊರತೆಗೆದು ಬಿಸುಟು ಇವುಗಳಿಂದ ನಮ್ಮಾತ್ಮ ಮಲಿನವಾಗದಂತೆ ಇಡುವ ಗುಡಿಯ ಭಟ್ಟರು ಹಣ, ನಮ್ಮ ಆತ್ಮದ ಪೂಜಾರಿ. ನಮ್ಮ ದೇವಸ್ಥಾನದಲ್ಲಿ ಅದಕ್ಕೆ ಹೀಗೆ ಪೂಜೆ ಸಲ್ಲಿಸುತ್ತಿರುವುದು ಬಹು ಉಚಿತವಾಗಿದೆ. (221 ಪದಗಳು) **(25 ಅಂಕಗಳು)**

**4**. ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ.

There is only one method by which to attain knowledge, that which is called concentration. The very essence of education is concentration of mind. From the lowest man to the highest yogi, all have to use the same method to attain knowledge. The chemist who works in his laboratory concentration all the powers of his mind, brings them into one focus, and throws them on the elements, the elements stand analysed, and thus his knowledge comes. The astronomer concentrates the powers of his mind and brings them into one focus, and he throws them on to objects through his telescope and stars and systems roll forward and give up their secrets to him. So, it is in every case, with the professor in his chair, the student with his book, with every man who is working to know. The more the power of concentration, the greater the knowledge that is acquired. **(25 ಅಂಕಗಳು)**

## SECTION - B
### ಭಾಗ – ಬಿ

**ಪತ್ರ ಲೇಖನ / Letter writing**

**5**. ಕೆಳಗಿನವುಗಳಲ್ಲಿ ಒಂದು ವಿಷಯವನ್ನು ಕುರಿತು 100 ಪದಗಳಲ್ಲಿ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ.

a) ನಗರ ವಾಹನ ಸಂಚಾರದ ಅನಾನುಕೂಲತೆ.

b) ನೀರಾವರಿ ಸೌಕರ್ಯ ನಿರ್ವಹಣೆಯಲ್ಲಿ ಸರ್ಕಾರದ ಪಾತ್ರ.

c) ಬಡಾವಣೆಗೊಂದು ಗ್ರಂಥಾಲಯ. **(10 ಅಂಕಗಳು)**

**6**. ಕೆಳಗಿನವುಗಳಲ್ಲಿ ಎರಡರ ಅರ್ಥಸ್ವಾರಸ್ಯವನ್ನು ವಿವರಿಸಿ.

a) ಸಜ್ಜನರ ಸಂಗ ಹೆಜ್ಜೇನು ಸವಿದಂತೆ

b) ಉಪ್ಪು ತಿಂದವನು ನೀರು ಕುಡಿಯಬೇಕು

c) ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ

d) ಹಾಸಿಗೆ ಇದ್ದಷ್ಟು ಕಾಲು ಚಾಚು **(10 ಅಂಕಗಳು)**

Teachingninja.in

**7**. ಕೆಳಗಿನ ನುಡಿಗಟ್ಟುಗಳಲ್ಲಿ ಎರಡರ ಅರ್ಥವನ್ನು ವಿವರಿಸಿ. ಅವುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಪ್ರಯೋಗಿಸಿ.

a) ಕಿಚ್ಚು ಹೊತ್ತಿಸು
b) ಆಕಾಶ ಕಳಚಿಬೀಳು
c) ಹೊಟ್ಟೆ ತಣ್ಣಗಿರಲಿ
d) ಕಲ್ಲು ಮನಸ್ಸು
e) ಮೂಗು ತೂರಿಸು **(5 ಅಂಕಗಳು)**

**8**. ಕೆಳಗಿನವುಗಳಲ್ಲಿ 5 ಕ್ಕೆ ತದ್ಭವ ರೂಪಗಳನ್ನು ಬರೆಯಿರಿ.

a) ವೀಥಿ
b) ಸಂಸ್ಥೆ
c) ಧ್ವನಿ
d) ಶ್ರೀ
e) ಸ್ಥೂಲ
f) ಆಜ್ಞಾ
g) ಕೂರ್ಪಾಸ
h) ರಾಜ್ಞೀ
i) ಆರ್ಯಾ
j) ಶಶಿ **(5 ಅಂಕಗಳು)**

**9**. ಈ ಕೆಳಗಿನವುಗಳಿಗೆ ತತ್ಸಮ ರೂಪಗಳನ್ನು ನೀಡಿ.

a) ಆಸೆ
b) ನಿದ್ದೆ
c) ಹುಣ್ಣಿಮೆ
d) ವಂಕಿ
e) ಮುಖ
f) ಆಸರೆ
g) ಕರ್ತ
h) ಗಾವಿಲ
i) ಚೌತಿ
j) ದಿಕ್ಕು **(5 ಅಂಕಗಳು)**

**10**. ಈ ಕೆಳಗಿನವುಗಳಲ್ಲಿ 5 ಕ್ಕೆ ವಿರುದ್ಧಾರ್ಥಕ ಶಬ್ದ ತಿಳಿಸಿ.

a) ಏಕತೆ
b) ಆಂತರ್ಯ
c) ಪ್ರತ್ಯಾರೋಪ
d) ಪರ
e) ಅಧಮ
f) ಉಲ್ಲಂಘನೆ
g) ಪಾರಮಾರ್ಥಿಕ
h) ಔದ್ಯೋಗೀಕರಣ
i) ಕೃತಕ
**j)** ಜವಾಬ್ದಾರಿ **(5 ಅಂಕಗಳು)**

Teachingninja.in

**11.** ಈ ಕೆಳಗಿನ ವಾಕ್ಯಗಳಲ್ಲಿ ಕಂಡುಬರುವ ಕಾಗುಣಿತಾಕ್ಷರಗಳ ತಪ್ಪುಗಳನ್ನು ತಿದ್ದಿ ಬರೆಯಿರಿ. **(2 x 5 = 10 ಅಂಕಗಳು)**

a) ನನ ಇ ಮತೂ ಸುಲ್ಲಾದರೆ ನಾನ್ ಮೂಗ ಕೂಯ್ದು ಕೊಲ್ಲುತೇನೆ.

b) ಖಿಮ್ಮಿ ಸಬ್ದದಲ್ಲಿ ಅದಿಕ ಬಾವ ತುಂಭುವುದು.

c) ಜಿವನ ಅನುಭವ ದೂಡ್ಡ ಶಂತೆ.

d) ಬಕ್ತಿಯಳ್ಳಿ ಬೆಡಿಕೆ ಇಳ್ಳ ಹರ್ಪಣೆ ಯಿದೆ.

e) ವ್ಯೆಕ್ತಿಯಾ ಮಾಗೂವಿಕೆಯೆ ಶಂಸ್ಕೃತಿ

Teachingninja.in